RPAD

ಕರ್ನಾಟಕ ಸರ್ಕಾರ

(ಔಷಧ ನಿಯಂತ್ರಣ ಇಲಾಖೆ)

ಕರ್ನಾಟಕ ರಾಜ್ಯದ ಔಷಧ ನಿಯಂತ್ರಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು–560001.

ಕಡತ ಸಂಖ್ಯೆ: ಔನಿಇ/ಆರ್‌ಟಿಐ/11/2022–23

ಅರ್ಜಿದಾರ:
ಶ್ರೀ ಪ್ರಶಾಂತ್,
ಬಿ.ಆರ್. ಹಿಲ್ಸ್ – 571441
prashanth.ns@gmail.com
**Online R.No: DCDKN/R/2022/60002**

ಪ್ರತಿವಾದಿ:
ಸಾರ್ವಜನಿಕ ಮಾಹಿತಿ ಅಧಿಕಾರಿ
ಹಾಗೂ ಪ್ರಧಾನ ವೈಜ್ಞಾನಿಕ ಅಧಿಕಾರಿ,
ಔಷಧ ಪರೀಕ್ಷಾ ಪ್ರಯೋಗಾಲಯ,
ಬೆಂಗಳೂರು

**ಈ ಅರ್ಜಿಯು ಮಾಹಿತಿ ಹಕ್ಕು ಅಧಿನಿಯಮ 2005ರ ನಿಯಮ 19(1)ರಲ್ಲಿ ಮೇಲ್ಮನವಿ ಸಲ್ಲಿಸಿದ ಕುರಿತು ಇರುತ್ತದೆ.**

1. ಶ್ರೀ ಪ್ರಶಾಂತ್‌ರವರು ಮೇಲ್ಮನವಿ ಪ್ರಾಧಿಕಾರಕ್ಕೆ ಆನ್‌ಲೈನ್‌ನಲ್ಲಿ ದಿನಾಂಕ 03.06.2022ರಲ್ಲಿ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಕೋರಿದ ದಾಖಲಾತಿಗಳನ್ನು ಒದಗಿಸಿಲ್ಲವೆಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

2. ದಿನಾಂಕ 13.06.2022 ರಂದು ಖುದ್ದು ವಿಚಾರಣೆಗೆ ಹಾಜರಾಗಲು ಆನ್‌ಲೈನ್‌ನಲ್ಲಿ ನಿಗದಿ ಪಡಿಸಲಾಗಿತ್ತು ಸದರಿ ದಿನಾಂಕದಂದು ಮೇಲ್ಮನವಿದಾರರಾದ ಶ್ರೀ ಪ್ರಶಾಂತ್‌ರವರು ಗೈರುಹಾಜರಾಗಿರುತ್ತಾರೆ. ಸಾರ್ವಜನಿಕ ಮಾಹಿತಿ ಅಧಿಕಾರಿ, ಕೇಂದ್ರ ಕಛೇರಿರವರು ಹಾಜರಾಗಿರುತ್ತಾರೆ. ಅರ್ಜಿದಾರರು ಹಾಜರಿಲ್ಲದ ಕಾರಣ ಮತ್ತೊಂದು ಅವಕಾಶವನ್ನು ನೀಡಿ ದಿನಾಂಕ 11.07.2022ರಂದು ಮುಂದೂಡಲಾಗಿರುತ್ತದೆ.

3. ಪ್ರಕರಣವನ್ನು ದಿನಾಂಕ 11.07.2022 ರಂದು ಪ್ರಕರಣವನ್ನು ಮೇಲ್ಮನವಿ ವಿಚಾರಣೆಗೆ ಕರೆದಾಗ ಅರ್ಜಿದಾರ ಶ್ರೀ ಪ್ರಶಾಂತ್‌ರವರು ಹಾಜರಾಗಿರುತ್ತಾರೆ. ಸಾರ್ವಜನಿಕ ಮಾಹಿತಿ ಅಧಿಕಾರಿ, ಕೇಂದ್ರ ಕಛೇರಿರವರು ಹಾಜರಾಗಿರುತ್ತಾರೆ.

4. ದಿನಾಂಕ 11.07.2022ರ ವಿಚಾರಣೆ ಸಮಯದಲ್ಲಿ ಅರ್ಜಿದಾರರು ಅರ್ಜಿ ದಿನಾಂಕ 08.05.2022ರಂದು ಕೇಳಿದ ದಾಖಲಾತಿಗಳಲ್ಲಿ ಕೇವಲ ಕ್ರ.ಸಂ. 1ರ ಮಾಹಿತಿಯನ್ನು ಮಾತ್ರ ಸಾರ್ವಜನಿಕ ಮಾಹಿತಿ ಅಧಿಕಾರಿರವರು ಒದಗಿಸಿದ್ದು ಉಳಿದ ಕ್ರ.ಸಂ. 2 ರಿಂದ 5 ರವರೆಗಿನ ಮಾಹಿತಿಯನ್ನು ಒದಗಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

5. ಸಾರ್ವಜನಿಕ ಮಾಹಿತಿ ಅಧಿಕಾರಿಯವರು ಉಳಿದ ಕ್ರ.ಸಂ. 2 ರಿಂದ 5 ರವರೆಗಿನ ಮಾಹಿತಿಯನ್ನು ಪರಿಶೀಲಿಸಿ ಲಭ್ಯವಿದ್ದಲ್ಲಿ ಒದಗಿಸುವುದಾಗಿ ತಿಳಿಸಿರುತ್ತಾರೆ.

ಮೇಲಿನ ವಾದ ವಿವಾದಗಳನ್ನು ಪರಿಗಣಿಸಿ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಸಂಖ್ಯೆ: ಔನಿಇ/ಆರ್‌ಟಿಐ/11/2022-23** **ದಿನಾಂಕ: 14.07.2022**

## ಆದೇಶ

ಪ್ರಕರಣದಲ್ಲಿ ಮೇಲ್ಮನವಿದಾರರು ಕೋರಿರುವ ಮಾಹಿತಿಯನ್ನು ಪರಿಶೀಲಿಸಿ ಲಭ್ಯವಿದ್ದಲ್ಲಿ 07 ದಿನಗಳೊಳಗಾಗಿ ಒದಗಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸೂಚಿಸಲಾಗಿದೆ.

(ಡಾ. ಅಮರೇಶ ತುಂಬಗಿ)
ಅಪರ ಔಷಧ ನಿಯಂತ್ರಕರು ಹಾಗೂ
ಪ್ರಥಮ ಮೇಲ್ಮನವಿ ಪ್ರಾಧಿಕಾರಿ

ಪ್ರತಿಯನ್ನು:

1. ಅರ್ಜಿದಾರರಿಗೆ
2. ಸಂಬಂಧಪಟ್ಟ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ